**Akashavni: Bangalore**
**National Bulletins In Kannada**
**11.07.2025 / 1.10pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**11.07.2025 / 1.10pm**

**<><*<><>*><>**

<u>ಮುಖ್ಯಾಂಶಗಳು</u>

1. ದೇಶಾದ್ಯಂತ ನಾಳೆ ೧೬ನೇ ಉದ್ಯೋಗ ಮೇಳ; ೫೧ ಸಾವಿರಕ್ಕೂ ಹೆಚ್ಚು ನೇಮಕಾತಿ ಪತ್ರ ವಿತರಿಸಲಿರುವ ಪ್ರಧಾನಿ
2. ವ್ಯಾಪಕ ಯುಪಿಐ ಅಳವಡಿಕೆಯಿಂದ ಜಗತ್ತಿನಲ್ಲೇ ಅತೀ ವೇಗದ ಪಾವತಿಯಲ್ಲಿ ಭಾರತ ಮುಂಚೂಣಿ - ಐಎಂಎಫ್
3. ಇಂದು ವಿಶ್ವ ಜನಸಂಖ್ಯಾ ದಿನ - ತಾಯಂದಿರ ಮತ್ತು ಮಕ್ಕಳ ಆರೋಗ್ಯಕ್ಕಾಗಿ ಯೋಜಿತ ಪೋಷಣೆಗೆ ಉತ್ತೇಜನೆ
4. ವಿಂಬಲ್ಡನ್ ಟೆನ್ನಿಸ್ - ಪುರುಷರ ಸಿಂಗಲ್ಸ್ ಸೆಮಿಫೈನಲ್ ನಲ್ಲಿಂದು ಕಾರ್ಲೋಸ್ ಅಲ್ಕರಾಜ್ ಕಣದಲ್ಲಿ
5. ಭಾರತ-ಇಂಗ್ಲೆಂಡ್ ಆಂಡರ್ಸನ್ ತೆಂಡೂಲ್ಕರ್ ಟ್ರೋಫಿ - ಮೂರನೇ ಪಂದ್ಯದ ಎರಡನೇ ದಿನದಾಟ ಅಪರಾಹ್ನ ೩.೩೦ಕ್ಕೆ ಆರಂಭ

**********

ದೇಶದಾದ್ಯಂತ ನಾಳೆ ೪೭ ಸ್ಥಳಗಳಲ್ಲಿ ೧೬ ನೇ ಉದ್ಯೋಗ ಮೇಳ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಲ್ಲಿ ಹೊಸದಾಗಿ ನೇಮಕಗೊಂಡ ಯುವಉದ್ಯೋಗಿಗಳಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ೫೧ ಸಾವಿರಕ್ಕೂ ಹೆಚ್ಚು ನೇಮಕಾತಿ ಪತ್ರಗಳನ್ನು ವಿತರಿಸಲಿದ್ದಾರೆ. ಈ ಸಂದರ್ಭದಲ್ಲಿ ಅವರು ಮಕಗೊಂಡವರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ದೇಶಾದ್ಯಂತ ಆಯ್ಕೆಯಾದ ಹೊಸ ನೇಮಕಾತಿದಾರರು ರೈಲ್ವೆ, ಗೃಹ ವ್ಯವಹಾರಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಕಾರ್ಮಿಕ ಮತ್ತು ಉದ್ಯೋಗ ಹಾಗು ಅಂಚೆ ಇಲಾಖೆ ಸೇರಿದಂತೆ ಇತರ ಇಲಾಖೆಗಳು ಮತ್ತು ಸಚಿವಾಲಯಗಳಿಗೆ ಸೇರಲಿದ್ದಾರೆ. ದೇಶಾದ್ಯಂತ ಉದ್ಯೋಗ ಮೇಳಗಳ ಮೂಲಕ ಇಲ್ಲಿಯವರೆಗೆ ಹತ್ತು ಲಕ್ಷಕ್ಕೂ ಹೆಚ್ಚು ನೇಮಕಾತಿ ಪತ್ರಗಳನ್ನು ನೀಡಲಾಗಿದೆ.ಉದ್ಯೋಗ ಸೃಷ್ಟಿಗೆ ಹೆಚ್ಚಿನ ಆದ್ಯತೆ ನೀಡುವ ಪ್ರಧಾನಿಯವರ ಬದ್ಧತೆಗೆ ಈ ಮೇಳ ಒಂದು ಹೆಜ್ಜೆಯಾಗಿದೆ. ಯುವಜನತೆಯ ಸಬಲೀಕರಣ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಅವರ ಭಾಗವಹಿಸುವಿಕೆಗಾಗಿ ಅರ್ಥಪೂರ್ಣ ಅವಕಾಶಗಳನ್ನು ಒದಗಿಸುವಲ್ಲಿ ಈ ಉದ್ಯೋಗ ಮೇಳ ಮಹತ್ವದ ಪಾತ್ರ ವಹಿಸುತ್ತದೆ.

**********

ಏಕೀಕೃತ ಪಾವತಿ ವ್ಯವಸ್ಥೆ - ಯುಪಿಐ ನ ವ್ಯಾಪಕ ಅಳವಡಿಕೆಯಿಂದಾಗಿ ಭಾರತ ಜಗತ್ತಿನ ಎಲ್ಲ ದೇಶಗಳಿಗಿಂತ ವೇಗವಾಗಿ ಪಾವತಿಗಳನ್ನು ನಿರ್ವಹಿಸುತ್ತಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿ ಐಎಂಎಫ್ ತಿಳಿಸಿದೆ.ತನ್ನ ಹೇಳಿಕೆಯಲ್ಲಿ ಐಎಂಎಫ್, ಭಾರತದಲ್ಲಿ ಡಿಜಿಟಲ್ ಪಾವತಿಗಳ ಪರಿಕಲ್ಪನೆಯನ್ನು ಯುಪಿಐ ಸಂಪೂರ್ಣವಾಗಿ ಬದಲಾಯಿಸಿದೆ. ಡಿಜಿಟಲ್ ಪಾವತಿಗಳು ಬಳಕೆದಾರರ ಅನುಭವದ ಸುಧಾರಣೆ ಮತ್ತು ಒಟ್ಟಾರೆ ಅಳವಡಿಕೆಯನ್ನು ವಿಸ್ತರಿಸಬಹುದು ಎಂದು ಹೇಳಿದೆ.

೨೦೧೬ ರಲ್ಲಿ ಪ್ರಾರಂಭವಾದ UPI, ಈಗ ತಿಂಗಳಿಗೆ ೧೮ ಶತಕೋಟಿಗೂ ಹೆಚ್ಚು ವಹಿವಾಟುಗಳನ್ನು ನಡೆಸುತ್ತಿದೆ. ಯುಪಿಐ ಎಂಬುದು ತಕ್ಷಣದ ಪಾವತಿ ಸೇವೆ ಮೂಲಸೌಕರ್ಯದ ಮೇಲೆ ನಿರ್ಮಿಸಲಾದ ತ್ವರಿತ ಪಾವತಿ ವೇದಿಕೆಯಾಗಿದೆ.ಐಎಂಎಫ್ ನ ಈ ವರದಿ, ಭಾರತ ಡಿಜಿಟಲ್ ಹಣಕಾಸು ತಂತ್ರಜ್ಞಾನದಲ್ಲಿ ಅಗ್ರಗಣ್ಯ ಸ್ಥಾನದತ್ತ ಸಾಗುತ್ತಿದೆ ಮತ್ತು ಯುಪಿಐ ವ್ಯವಸ್ಥೆ, ಇತರೆ ರಾಷ್ಟ್ರಗಳಿಗೂ ಮಾದರಿಯಾಗಬಹುದು ಎಂಬುದಕ್ಕೆ ಪೂರಕವಾಗಿದೆ.

**********

ಇಂದು ವಿಶ್ವ ಜನಸಂಖ್ಯಾದಿನ ಪ್ರತಿ ವ?ಜುಲೈ ೧೧ ರಂದು ವಿಶ್ವ ಜನಸಂಖ್ಯಾ ದಿನವನ್ನು ಆಚರಿಸಲಾಗುತ್ತದೆ. "ತಾಯಿ ಮತ್ತು ಮಗುವಿನ ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಗರ್ಭಧಾರಣೆಯ ಆರೋಗ್ಯಕರ ಸಮಯ ಮತ್ತು ಅಂತರ ಎಂಬುದು ಈ ವ?ದ ಧ್ಯೇಯವಾಕ್ಯವಾಗಿದೆ. ಜನಸಂಖ್ಯೆ, ಪರಿಸರ ಮತ್ತು ಅಭಿವೃದ್ಧಿಯ ನಡುವಿನ ಸಂಬಂಧಗಳ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ೧೯೯೦ರ ಜುಲೈ ೧೧ರಂದು ವಿಶ್ವದ ೯೦ಕ್ಕೂ ಅಧಿಕ ರಾ?ಗಳಲ್ಲಿ ಮೊದಲ ಬಾರಿ ಈ ದಿನ ಆಚರಿಸಲಾಯಿತು. ತಾಯಂದಿರ ಮತ್ತು ಮಕ್ಕಳ ಆರೋಗ್ಯದಲ್ಲಿ ಸುಧಾರಣೆ ಸಾಧಿಸಲು ಯೋಜಿತ ಪೋ?ಕತ್ವ ಅತ್ಯಗತ್ಯ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಹೇಳಿದ್ದಾರೆ.ಸಾಮಾಜಿಕ ಮಾಧ್ಯಮದಲ್ಲಿ ಸಂದೇಶ ಹಂಚಿಕೊಂಡಿರುವ ಅವರು, ಜನಸಂಖ್ಯೆ ಸಂಬಂಧಿತ ಸವಾಲುಗಳಿಗೆ ಸ್ಪಂದಿಸಲು ಹಾಗೂ ಕುಟುಂಬ ನಿಯೋಜನೆಯ ಕುರಿತಾಗಿ ಜಾಗೃತಿ ಮೂಡಿಸಲು ಈ ದಿನ ವೇದಿಕೆಯಾಗುತ್ತದೆ. ಸರ್ಕಾರ ದೇಶಾದ್ಯಂತ ಜನತೆಗೆ ಅಗತ್ಯವಾದ ಕುಟುಂಬ ಯೋಜನೆ ಸೇವೆಗಳನ್ನು ಒದಗಿಸುತ್ತಿದೆ, ಇದರಿಂದ ಕುಟುಂಬಗಳು ಸದೃಢವಾಗುತ್ತಿದ್ದು, ಆರೋಗ್ಯಕರ ಭಾರತದತ್ತ ಹೆಜ್ಜೆಯಿಡಲಾಗುತ್ತಿದೆ ಎಂದರು. ಸರ್ಕಾರದ ಆರೋಗ್ಯ ಸೇವೆಗಳಾದ ಆಯು?ನ್ ಆರೋಗ್ಯ ಮಂದಿರಗಳ ಮೂಲಕ ಈ ಸೇವೆಗಳನ್ನು ಜನತೆಗೆ ತಲುಪಿಸಲಾಗುತ್ತಿದೆ ಎಂದಿದ್ದಾರೆ.

**********

ಯುವಜನ ಹಾಗೂ ಕ್ರೀಡಾ ವ್ಯವಹಾರಗಳ ಸಚಿವ ಡಾ. ಮನ್‌ಸುಖ್ ಮಾಂಡವಿಯಾ, ಜುಲೈ ೧೩ರಂದು ನಡೆಯಲಿರುವ ಫಿಟ್ ಇಂಡಿಯಾ ಸಂಡೇಸ್ ಆನ್ ಸೈಕಲ್ ಅಭಿಯಾನದ ೩೧ನೇ ಆವೃತ್ತಿಯಲ್ಲಿ  ನಾಗರೀಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಅಭಿಯಾನದ  ಉತ್ಸಾಹವನ್ನು ಮುಂದುವರಿಸಲು ಕರೆ ನೀಡಿದ್ದಾರೆ.ಯುವಜನ ಮತ್ತು ಕ್ರೀಡಾ ವ್ಯವಹಾರಗಳ ಸಚಿವಾಲಯದ  ಪ್ರಕಾರ, ಈ ಸೈಕಲ್  ಅಭಿಯಾನ ದೇಶದಾದ್ಯಂತ ೬ ಸಾವಿರಕ್ಕಿಂತ ಹೆಚ್ಚು ಸ್ಥಳಗಳಲ್ಲಿ ನಡೆಯಲಿದ್ದು, ೫೦ ಸಾವಿರಕ್ಕೂ ಹೆಚ್ಚು ಮಂದಿ  ಭಾಗವಹಿಸುವ ನಿರೀಕ್ಷೆಯಿದೆ.ಈ ಆವೃತ್ತಿಯ ಪ್ರಮುಖ ಆಕರ್ಷಣೆಯಾದ ಮಾಜಿ ಡಬ್ಲ್ಯೂಡಬ್ಲ್ಯೂಇ ಮಾಜಿ ಚಾಂಪಿಯನ್ ಗ್ರೇಟ್ ಖಲಿ, ನವದೆಹಲಿಯ ಮೇಜರ್ ಧ್ಯಾನ್‌ಚಂದ್ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಸಾರ್ವಜನಿಕ ಉದ್ದಿಮೆಗಳ ಜೊತೆಗೆ ಸೈಕ್ಲಿಂಗ್ ಅಭಿಯಾನ ಪಾಲ್ಗೊಳ್ಳಲಿದ್ದಾರೆ. ಗುರುಗ್ರಾಮ್‌ನಲ್ಲಿ ವಿಶೇಷ ಕಾರ್ಯಕ್ರಮವೂ ನಡೆಯಲಿದ್ದು, ನೃತ್ಯ ಶಾಖೆಗಳು, ಹಾಗೂ ಲುಡೋ, ಕೇರಂ, ಹಾವು ಏಣಿ ಸೇರಿದಂತೆ ಒಳಾಂಗಣ ಆಟಗಳ ಮೂಲಕ ಸಾರ್ವಜನಿಕ ಸ್ಥಳಗಳನ್ನು ಆಟದ ಮೈದಾನಗಳಾಗಿ ರೂಪಿಸಲಾಗುತ್ತದೆ ಎಂದು ಮಂತ್ರಾಲಯ ತಿಳಿಸಿದೆ.

**********

೨ ಸಾವಿರ ಮುಖಬೆಲೆ ನೋಟುಗಳು ಇದೀಗ ವಹಿವಾಟಿನಲ್ಲಿ ಬಳಕೆಯಾಗುತ್ತಿಲ್ಲವಾದರೂ, ಅವುಗಳು ಇನ್ನೂ ಕಾನೂನಾತ್ಮಕ ಮಾನ್ಯತೆ ಹೊಂದಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ - ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ

ಸ್ಪಷ್ಟಪಡಿಸಿದ್ದಾರೆ. ಭಾರತದ ಆರ್ಥಿಕ ಬೆಳವಣಿಗೆ ಕುರಿತು ಸಂಸತ್‌ನ ಹಣಕಾಸು ಸ್ಥಾಯಿ ಸಮಿತಿಗೆ ಮಾಹಿತಿ ನೀಡುವ ವೇಳೆ ಅವರು ಈ ಕುರಿತು ಸ್ಪಷ್ಟಪಡಿಸಿದ್ದಾರೆ. ಸಮಿತಿಯ ಸಭೆಯಲ್ಲಿ ಹಲವಾರು ಸಂಸದರು ೨ ಸಾವಿರ ಮುಖಬೆಲೆ ನೋಟುಗಳ ಸ್ಥಿತಿಗತಿಯ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಇದುವರೆಗೆ ಆರ್‌ಬಿಐ ಈ ನೋಟುಗಳನ್ನು ಅಮಾನ್ಯ ಎಂದು ಘೋಷಿಸಿಲ್ಲ ಎಂದರು.ಒರ್ವ ಸಂಸದರು ನಕಲಿ ನೋಟುಗಳ ಬಗ್ಗೆ ಕಳವಳ ವ್ಯಕ್ತಪಡಿಸಿ, ೫೦೦ ಮುಖಬೆಲೆಯ ೧.ಲಕ್ಷ ೧೨ ಸಾವಿರ ನಕಲಿ ನೋಟುಗಳನ್ನು ಜಾರಿ ಸಂಸ್ಥೆಗಳು ವಶಪಡಿಸಿಕೊಂಡಿರುವ ಕುರಿತು ಮಾಹಿತಿ ನೀಡಿದರು. ಆದರೆ, ಆರು ಕೋಟಿ ಅಸಲಿ ನೋಟುಗಳು ವಹಿವಾಟಿನಲ್ಲಿ ಇರುವುದರಿಂದ, ನಕಲಿ ನೋಟುಗಳ ಪ್ರಮಾಣ ಹೆಚ್ಚಿಲ್ಲವೆಂಬುದಾಗಿ ಅವರು ತಿಳಿಸಿದರು.

ಪ್ರತಿಶತ೨ ಹೆಚ್ಚಳ ಕಂಡುಬಂದಿದೆ ಎಂದು ಒಪ್ಪಿಕೊಂಡರು. ನಕಲಿ ನೋಟುಗಳ ತಡೆಯತ್ತ ಕೇಂದ್ರ ಬ್ಯಾಂಕು ಹಾಗೂ ಸರ್ಕಾರ ಬದ್ಧವಾಗಿದ್ದು, ಈ ಸಂಬಂಧ ನಿರಂತರ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಅವರು ಭರವಸೆ ನೀಡಿದರು.

**********

ನಿಕೋಬಾರ್ ದ್ವೀಪಗಳಿಂದ ಸುಮಾರು ೫೩ ಮೈಲುಗಳಷ್ಟು ದಕ್ಷಿಣಕ್ಕೆ ಸಿಲುಕಿದ್ದ ಇಬ್ಬರು ಅಮೇರಿಕನ್ ಪ್ರಜೆಗಳನ್ನು ಭಾರತೀಯ ಕರಾವಳಿ ಕಾವಲು ಪಡೆ, ಇಂದು ರಕ್ಷಿಸಿದೆ.ಅಮೆರಿಕ ಧ್ವಜ ಹೊಂದಿರುವ ನೌಕಾಯಾನ ಹಡಗು 'ಸೀ ಏಂಜೆಲ್' ಬಗ್ಗೆ ಚೆನ್ನೈನಲ್ಲಿರುವ ಅಮೇರಿಕನ್ ಕಾನ್ಸುಲೇಟ್ ತುರ್ತು ಸಂದೇಶವನ್ನು ಕಳುಹಿಸಿದ ನಂತರ, ಐಸಿಜಿ ಹಡಗು ರಾಜ್‌ವೀರ್ ಯಶಸ್ವಿ ರಕ್ಷಣಾ ಕಾರ್ಯಾಚರಣೆಯನ್ನು ನಡೆಸಿದೆ.

**********

ಇಂದು ಸಂಜೆ ಲಂಡನ್‌ನಲ್ಲಿ ನಡೆಯಲಿರುವ ವಿಂಬಲ್ಡನ್ ಟೆನಿಸ್‌ನ ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ , ಆರನೇ ಶ್ರೇಯಾಂಕಿತ ಮತ್ತು ಏಳು ಬಾರಿಯ ಚಾಂಪಿಯನ್ ಸರ್ಬಿಯಾದ ನೊವಾಕ್ ಜೊಕೊವಿಚ್ ಇಟಲಿಯ ಅಗ್ರ ಶ್ರೇಯಾಂಕಿತ ಆಟಗಾರ ಜಾನಿಕ್ ಸಿನ್ನರ್ ಅವರನ್ನು ಎದುರಿಸಲಿದ್ದಾರೆ. ಮತ್ತೊಂದು ಸೆಮಿಫೈನಲ್ ಪಂದ್ಯದಲ್ಲಿ, ಎರಡನೇ ಶ್ರೇಯಾಂಕಿತ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್, ಐದನೇ ಶ್ರೇಯಾಂಕಿತ ಅಮೆರಿಕಾದ ಟೇಲರ್ ಫ್ರಿಟ್ಜ್ ಅವರನ್ನು ಎದುರಿಸಲಿದ್ದಾರೆ.ಮಹಿಳಾ ಸಿಂಗಲ್ಸ್‌ನಲ್ಲಿ, ಐದು ಬಾರಿಯ ಗ್ರ್ಯಾಂಡ್ ಸ್ಲ್ಯಾಮ್ ಚಾಂಪಿಯನ್ ಇಗಾ ಸ್ವಿಯೆಟೆಕ್ ನಾಳೆ ೧೩ ನೇ ಶ್ರೇಯಾಂಕಿತ ಅಮಂಡಾ ಅನಿಸಿಮೊವಾ ಅವರೊಂದಿಗೆ ನಾಳೆ ಪ್ರಶಸ್ತಿ ಸುತ್ತಿನ ಹಣಾಹಣಿಗೆ ಸಜ್ಜಾಗುತ್ತಿದ್ದಾರೆ.ಇದಕ್ಕೂ ಮುನ್ನ ಅಮೆರಿಕದ ಅನಿಸಿಮೊವಾ, ನಿನ್ನೆ ನಡೆದ ಸೆಮಿಫೈನಲ್ ಪಂದ್ಯದಲ್ಲಿ ವಿಶ್ವದ ಅಗ್ರ ಶ್ರೇಯಾಂಕಿತ ಆಟಗಾರ್ತಿ ಬೆಲಾರಸ್‌ನ ಅರಿನಾ ಸಬಲೆಂಕಾ ಅವರನ್ನು ೬-೪, ೪-೬, ೬-೪ ಸೆಟ್‌ಗಳಿಂದ ಸೋಲಿಸಿ ಮೊದಲನೆ ಬಾರಿ ವಿಂಬಲ್ಡನ್ ಟೆನಿಸ್‌ನಲ್ಲಿ ಫೈನಲ್ ತಲುಪಿದ್ದಾರೆ.ನಿನ್ನೆ ನಡೆದ ಮಿಶ್ರ ಡಬಲ್ಸ್ ಟೆನಿಸ್ ಫೈನಲ್ ಪಂದ್ಯದಲ್ಲಿ ಜೆಕ್ ಆಟಗಾರ್ತಿ ಕ್ಯಾಟರಿನಾ ಸಿನಿಯಾಕೋವಾ ಮತ್ತು ನೆದರ್ಲೆಂಡ್ಸ್‌ನ ಸೆಮ್ ವರ್ಬೀಕ್ ಜೋಡಿ, ಬ್ರಿಟನ್‌ನ ಜೋ ಸಾಲಿಸ್‌ಬರಿ ಮತ್ತು ಬ್ರೆಜಿಲಿನ್ ನ ಲೂಯಿಸಾ ಸ್ಟೆಫಾನಿ ಅವರನ್ನು ೭-೬ ೭-೬ ಸೆಟ್‌ಗಳಿಂದ ಸೋಲಿಸಿ ಮಿಶ್ರ ಡಬಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡಿತು.

**********

ಇಂಗ್ಲೆಂಡ್ ನ ಲಾರ್ಡ್ಸ್‌ನಲ್ಲಿ ನಿನ್ನೆ ಆರಂಭವಾದ ಆಂಡರ್ಸನ್-ತೆಂಡೂಲ್ಕರ್ ಕ್ರಿಕೆಟ್ ಟ್ರೋಫಿಯ, ಮೂರನೇ ಟೆಸ್ಟ್‌ನ ಮೊದಲ ದಿನದಂದು ಇಂಗ್ಲೆಂಡ್ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೪ ವಿಕೆಟ್‌ಗೆ ೨೫೧ ರನ್ ಗಳಿಸಿತು.ಜೋ ರೂಟ್ ಅಜೇಯ ೯೯ ರನ್

ಮತ್ತು ಬೆನ್ ಸ್ಟೋಕ್ಸ್ ೩೯ ರನ್‌ಗಳಿಸಿ ಇಂದಿಗೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಇಂದಿನ ದಿನದಾಟ ಅಪರಾಹ್ನ ೩.೩೦ ಕ್ಕೆ ಆರಂಭವಾಗಲಿದೆ.

. **********